**ಚಾಸಾ-8 ಪಾ ಸಾ-4**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 6601/2017**

| | |
|---|---|
| **ಸಾಕ್ಷಿದಾರರ ಹೆಸರು** | ಅಂಜಲಿ.ಸಿ., |
| **ಗಂಡನ ಹೆಸರು** | ನಾರಾಯಣ್. |
| **ವಯಸ್ಸು** | 53 ವರ್ಷ |
| **ಉದ್ಯೋಗ** | ಉಪನೊಂದಣಾಧಿಕಾರಿ, ಜಿಗಣಿ. |
| **ವಾಸ** | ನಾಗರಭಾವಿ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 09.04.2025. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 2016 ರಿಂದ 2020 ರವರೆಗೆ ದೇವನಹಳ್ಳಿಯಲ್ಲಿ ಉಪನೊಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆರ್.ಟಿ.ನಗರ ಪೊಲೀಸ್ ಠಾಣೆಯವರು ದೃಡೀಕೃತ ದಾಖಲಾತಿಗಳನ್ನು ನೀಡುವಂತೆ ದಿ.26.12.20116 ರಂದು ನನಗೆ ಒಂದು ನೋಟಿಸ್ ನ್ನು ನೀಡಿರುತ್ತಾರೆ. ಸಾಕ್ಷಿಯು ದಿ.26.12.2016 ರಂದು ಆರ್.ಟಿ. ನಗರ ಪೊಲೀಸ್ ಠಾಣೆಯವರಿಗೆ ನೀಡಿದ ಪತ್ರವನ್ನು ನಿಪಿ.3 ಎಂದು, ಸಾಕ್ಷಿ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ದೃಡೀಕೃತ ಋಣಭಾರ ರಹಿತ್ಯಾ ಪ್ರಮಾಣ ಪತ್ರವನ್ನು ನಿಪಿ.4 ಎಂದು, ದೃಡೀಕೃತ ಕ್ರಯ ರದ್ದಾಯಿತಿ ಪತ್ರವನ್ನು ನಿಪಿ.5 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ.ಎಸ್.ಎಂ. ಆರೋಪಿ ಪರ ವಕೀಲರಿಂದಃ**

ನಿಪಿ.5 ರ ದಾಖಲೆಯನ್ನು ನಾನು ನೊಂದಣಿ ಮಾಡಿರುವುದಿಲ್ಲ. ಯಾವುದೇ ಕ್ರಯ ಪತ್ರ ನೊಂದಣಿ ಅಥವಾ ರದ್ದು ಮಾಡಲು ಸಂದರ್ಭದಲ್ಲಿ ಇಬ್ಬರು ಪಕ್ಷಗಾರರಿಗೆ ಹಣವೂ ಸಂದಾಯವಾಗಿದೆ ಇಲ್ಲವೋ ಎಂದು ಕೇಳುತ್ತೇವೆ ಎಂದರೆ ಸರಿ. ನಾನು ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**

**ಬೆಂಗಳೂರು.**

ಚಾಸಾ-8 ಪಾಸಾ-4